# ಪದವಿ ಕನ್ನಡ

## ಅನುಬಂಧಗಳು

### ಅನುಬಂಧ 1:

### ಕಲಿಕಾ ಯೋಜನೆಯ ಕೆಲವು ಸೂಚನೆಗಳು

1. ನಿಗದಿಗಿಂತ ಅಧಿಕ ಅವಧಿ ದೊರಕಿದಲ್ಲಿ ಅವನ್ನು ಪುನಾರವರ್ತನೆ, ಟ್ಯುಟೋರಿಯಲ್, ಸ್ಲೋಲರ್ನರ್?, ಪರೀಕ್ಷಾ ಸಮಯ ಯೋಜನೆ, ಚಟುವಟಿಕೆ, ಸೆಮಿನಾರ್ ತರಗತಿಗಳಿಗೆ ಬಳಸುವುದು
2. ಚಟುವಟಿಕೆಗಳನ್ನು ತರಗತಿಯ ಹೊರಗೆ ಮತ್ತು ಒಳಗೆ ನಡೆಸಲು ಯೋಜನೆ ಮಾಡಿಕೊಳ್ಳುವುದು.
3. ಒಂದು ಸೆಮಿಸ್ಟರಿಗೆ ಒಂದು ಬಾರಿ ಶೈಕ್ಷಣಿಕ ಪ್ರವಾಸಕ್ಕೆ ಯೋಜಿಸುವುದು.
4. ವಿಚಾರ ಸಂಕಿರಣಗಳಿಗೆ, ಜನಪದ ಪ್ರದರ್ಶನ ಕಲೆಗಳ ವೀಕ್ಷಣೆಗೆ, ಕವಿಗೋಷ್ಠಿಗಳಿಗೆ, ನಾಟಕಗಳಿಗೆ ಇನ್ನಿತರ ಸಾಹಿತ್ಯ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳಿಗೆ ಎಕ್ಸ್‌ಪೋಶರ್ ನೀಡುವುದು.
5. ಕಲಿಕೆಯಲ್ಲಿ ಔದ್ಯೋಗಿಕ ಭಾಷಾ ಕೌಶಲ ಮತ್ತು ಸಾಮರ್ಥ್ಯ ವೃದ್ಧಿಗೆ ಹೆಚ್ಚಿನ ಒತ್ತು ನೀಡುವುದು.
6. ತಂತ್ರಜ್ಞಾನವನ್ನು ಕಲಿಕೆಯಲ್ಲಿ ಯಶಸ್ವಿಯಾಗಿ ಬಳಸುವುದು ಮತ್ತು ಬಳಸಲು ಪ್ರೋತ್ಸಾಹಿಸುವುದು.
7. ಆಯಾಯಾ ಥೀಮ್, ಕೋರ್ಸ್, ಕಾಲಾವಕಾಶ ಮತ್ತು ಕಾಲೇಜಿನ ಸ್ಥಳೀಯತೆ ಆಧರಿಸಿ ಇಲ್ಲಿನ ಮಾದರಿ ಅನುಸರಿಸಿ ನಿಮ್ಮದೇ ಯೋಜನೆ ಮಾಡಿಕೊಳ್ಳಬಹುದು.
8. ತರಗತಿ ಕಲಿಕೆಯಲ್ಲಿ ಪೂರಕ ಪಠ್ಯವನ್ನು ಬೋಧಿಸುವ ಅಗತ್ಯವಿಲ್ಲ. ಕೊನೆ ಪರೀಕ್ಷೆಗೂ ಅವುಗಳಿಂದ ಪ್ರಶ್ನೆಗಳು ಇರುವುದಿಲ್ಲ. ಆದನ್ನು ಆಂತರಿಕ ಚಟುವಟಿಕೆಗಳಿಗೆ ಬಳಸಬಹುದು.

### ಅನುಬಂಧ 2:

**ಪ್ರಶ್ನೆಪತ್ರಿಕೆ ನೀಲನಕ್ಷೆ**: ಭಾಷಾ ಪ್ರಶ್ನೆಪತ್ರಿಕೆಯ ನೀಲನಕ್ಷೆ

1. ಬೆಂ.ವಿ.ವಿ. ಮೊದಲ ಸೆಮಿಸ್ಟರ್ ಕನ್ನಡ ಭಾಷಾ ಪಠ್ಯಕ್ಕೆ ಅನ್ವಯಿಸುವಂತೆ

1. ಪಠ್ಯದಿಂದ 6 ಪ್ರಶ್ನೆಗಳು, 5ಕ್ಕೆ ಉತ್ತರ (100 ಪದಗಳು ಮೀರದಂತೆ) ತಲಾ 5ರಂತೆ 25 ಅಂಕ
2. ಪಠ್ಯದಿಂದ 4 ಪ್ರಶ್ನೆಗಳು, 3ಕ್ಕೆ ಉತ್ತರ (200 ಪದಗಳು ಮೀರದಂತೆ) ತಲಾ 10ರಂತೆ 30 ಅಂಕ
3. ಆಯ್ದ ಭಾಗ ನೀಡಿ 3ನೆ 1 ಭಾಗಕ್ಕೆ ಸಂಕ್ಷೇಪಿಸುವುದು ಮತ್ತು ಟೈಟಲ್ ನೀಡುವುದು 5 ಅಂಕ
4. ಸಂಕ್ಷೇಪಿಸಿದ ಭಾಗ ಆಧರಿಸಿ ಎರಡು ಪ್ರಶ್ನೆ ರೂಪಿಸುವುದು 2 ಅಂಕ
5. ನಾಲ್ಕು ಪದಗಳನ್ನು ನೀಡಿ 2 ಪದಗಳನ್ನು ಬಳಸಿ ವಾಕ್ಯ ರಚಿಸುವುದು 4 ಅಂಕ
6. ರಕ್ತ ಸಂಬಂಧಿಗಳಿಗೆ ಪತ್ರ ಬರೆಯುವುದು/ ಕಛೇರಿಗೆ ಅರ್ಜಿ ಬರೆಯುವುದು 5 ಅಂಕ
7. 8 ಪದಗಳನ್ನು ನೀಡಿ 4 ಕ್ಕೆ ಅರ್ಥ ಬರೆಯಲು ಹೇಳುವುದು 4 ಅಂಕ
8. ಬಹು ಆಯ್ಕೆ ಉತ್ತರದ 5 ಪ್ರಶ್ನೆಗಳು, 5ಕ್ಕೆ ಉತ್ತರ 5 ಅಂಕ

ಒಟ್ಟು ಅಂಕಗಳು 80

### ಅನುಬಂಧ– 2 ಎ: ಪ್ರಶ್ನೆಪತ್ರಿಕೆ ನೀಲನಕ್ಷೆಯ ಕೆಲವು ಸೂಚನೆಗಳು

1. ಮೊದಲಿಗೆ ದೀರ್ಘ ಉತ್ತರದ ಪ್ರಶ್ನೆಗಳನ್ನು ಕೇಳಬೇಕು.
2. ಉದ್ಯೋಗ ಕೌಶಲದ ಮತ್ತು ಭಾಷಾ ಕೌಶಲದ ಕಾರಣಕ್ಕೆ ಸಂಕ್ಷೇಪ ಪ್ರಶ್ನೆ, ಪತ್ರಲೇಖನ, ಅರ್ಜಿ ಬರಹ, ಬಹು ಆಯ್ಕೆ ಪ್ರಶ್ನೆ, ವಾಕ್ಯರಚನೆ, ಪದಕೋಶದ ಪ್ರಶ್ನೆಗಳನ್ನು ಕೇಳಬೇಕು. ಎಲ್ಲವೂ ಪಠ್ಯ ಸಂಬಂಧಿ ಆಗಿಯೆ ಇರಬೇಕು.
3. 5 ಅಂಕದ ಪ್ರಶ್ನೆಗಳಿಗೆ ಸ್ವಂತ ನಿಲುವು, ಚರ್ಚೆ, ವಿವರಣೆ, ತರ್ಕ, ವಿಶ್ಲೇಷಣೆ ಬಯಸುವ ಪ್ರಶ್ನೆಗಳನ್ನು ಕೇಳಬೇಕು.
4. ಬಿಕ್ಕಟ್ಟು ನಿವಾರಣೆ ಸಾಮರ್ಥ್ಯ, ಭಾವನಾತ್ಮಕ ಬುದ್ಧಿಶಕ್ತಿ ಬಗ್ಗೆ, ನಂಬಿಕೆ, ನಡೆ ನುಡಿ, ನೀತಿ ಕೇಂದ್ರಿತವಾಗಿ ಪ್ರಶ್ನೆ ಇರಬೇಕು.
5. ಮಾತು, ಓದು, ಬರಹದ ಕುರಿತಾದ ಪ್ರಶ್ನೆಗಳು ಇರಬೇಕು.
6. ಮಾನಸಿಕ ತುಮುಲ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಚಿಂತಿಸುವ ಬಗ್ಗೆ ಪ್ರಶ್ನೆ ಇರಬೇಕು.

## ಅನುಬಂಧ 3:
## ಮಾದರಿ ಪ್ರಶ್ನೆಪತ್ರಿಕೆ (80 ಅಂಕಗಳಿಗೆ)

### ಬೆಂಗಳೂರು ವಿಶ್ವವಿದ್ಯಾಲಯ
### ಪದವಿ ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ

ಅಂಕಗಳು: 80 ಸಮಯ: 3–00 ಗಂಟೆ

**I ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (100 ಪದಗಳನ್ನು ಮೀರದಂತೆ) 5X5=25**

1. ರತ್ನನ ಕನ್ನಡಾಭಿಮಾನದ ಸ್ವರೂಪವನ್ನು ಪರಿಚಯಿಸಿ.
2. "ನಾವು ಮತ್ತು ಮರಗಳು" ಪದ್ಯದಲ್ಲಿ ಬಳಸಲಾಗಿರುವ ರೂಪಕಗಳನ್ನು ಗುರುತಿಸಿ ಅದರ ವೈಶಿಷ್ಟತೆಯನ್ನು ಚರ್ಚಿಸಿ.
3. ಬಿದಿರು ಹೂ ಬಿಟ್ಟಿತೆಂದರೆ ಜನ ಭಯಭೀತರಾಗಲು ಕಾರಣಗಳೇನು?
4. ತಂತ್ರಜ್ಞಾನದ ಜೊತೆಗೆ ಮುಕ್ತ ಜ್ಞಾನವೂ ಬೇಕು– ಈ ಮಾತನ್ನು ವಿಸ್ತರಿಸಿ.
5. ಸಂವಿಧಾನದ ಮೂಲಭೂತ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸರ್ಕಾರಗಳು ಸಫಲವಾದವೆ? ನಿಮ್ಮ ಅಭಿಪ್ರಾಯಗಳೊಂದಿಗೆ ಉತ್ತರಿಸಿ.
6. ಸಬಾಲ್ಟರ್ನ್ ಅಧ್ಯಯನ ಎಂದರೇನು? ಅದು ಬೆಳೆದು ಬಂದ ಬಗೆಯನ್ನು ಪರಿಚಯಿಸಿ.

**II ಎರಡು ಪ್ರಶ್ನೆಗಳಿಗೆ ಉತ್ತರಿಸಿ (200 ಪದಗಳು ಮೀರದಂತೆ) 3X10=20**

1. ಮಾತೃಭಾಷೆ ಕಡ್ಡಾಯವಾಗಿ ಶಿಕ್ಷಣ ಮಾಧ್ಯಮವಾಗಬೇಕೇ? ದೇವನೂರು ಮಹದೇವ ಅವರ ವಿಚಾರಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನು? ಚರ್ಚಿಸಿ.
2. ಹಿಂದುಳಿದ ದೇಶಗಳ ಬೇಜವಾಬ್ದಾರಿತನ ಮತ್ತು ಮುಂದುವರಿದ ದೇಶಗಳ ದ್ವಂದ್ವ ನೀತಿಗಳನ್ನು ಕುರಿತಂತೆ ಪೂರ್ಣಚಂದ್ರ ತೇಜಸ್ವಿ ಅವರ ಅಭಿಪ್ರಾಯವೇನು? ವಿಶದಪಡಿಸಿ.
3. ಸರ್ವೋದಯ ಸಿದ್ಧಾಂತವನ್ನು ವಿವರಿಸಿ.
4. ಮುಸ್ಲಿಂ ಹುಡುಗಿ ಶಾಲೆಗೆ ಹೊರಟಾಗ ಬಂಧುಮಿತ್ರರ ಪ್ರತಿಕ್ರಿಯೆ ಹೇಗಿತ್ತು? ವಿವರಿಸಿ.

**III ಕೆಳಗಿನ ಪ್ಯಾಸೇಜನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ನೀಡಿರಿ.** 1X5=05

ಇಡೀ ಚೆಮನಾಡು ಗ್ರಾಮ ನೀರಿನಿಂದ ಆವೃತವಾಗಿದೆ. ಅಲ್ಲಲ್ಲಿ ಕೆಲವು ಮರಗಳ ತುದಿ ಮನೆಗಳ ಮಾಡು ಮಾತ್ರ ಕಾಣುತ್ತಿದ್ದವು. ಕೆಲವು ಮನೆಗಳ ಅರ್ಧಭಾಗ ನೀರಿನಲ್ಲಿ ಮುಳುಗಿದ್ದು ಸತ್ತ ಪ್ರಾಣಿಗಳಿಗಂತೂ ಲೆಕ್ಕವಿರಲಿಲ್ಲ. ದೊಡ್ಡ ದೊಡ್ಡ ಮರಗಳೂ ಮರದ ದಿಮ್ಮಿಗಳು ಅಲ್ಲಲ್ಲಿ ತೇಲುತ್ತಿದ್ದವು. ಕೆಲವು ಗುಡಿಸಲುಗಳ ಮಾಡುಗಳು ನೀರಿನಲ್ಲಿದ್ದರೆ ಮನೆಯೇ ನೀರಿನಲ್ಲಿ ತೇಲುತ್ತಿದೆ ಎನ್ನುವಂತೆ ಕಾಣುತ್ತಿತ್ತು. ಎಡೆಬಿಡದೆ ಸುರಿಯುತ್ತಿದ್ದ ಮಳೆ ಎಂದೂ ಸೌಮ್ಯವಾಗಿ ಮಂದಗಾಮಿನಿಯಾಗಿ ಹರಿದು ಜನರ ಮನವನ್ನು ತಂಪುಗೊಳಿಸುತ್ತಿದ್ದ ಚಂದ್ರಗಿರಿ ಅಂದು ಮಾತ್ರ ಮಹಾಕಾಳಿಯಂತೆ ರುದ್ರಾವತಾರ ತಾಳಿ ಸಾಗರದಂತೆ ಭೋರ್ಗರೆಯುತ್ತ ಕರೆಯುತ್ತ ಊರಿನ ವಿನಾಶದತ್ತ ಹೆಜ್ಜೆಯಿರಿಸಿದ್ದಳು.

**IV ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. 2X1=02**

**V ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. 2X2=04**

1. ನಿಸ್ಸಹಾಯಕ 2. ಸಾಫಲ್ಯ 3. ಉದ್ಯಮ ಸ್ನೇಹಿ 4. ದಿಕ್ಕುದೆಸೆ

**VI ರಸ್ತೆ ಅಗಲೀಕರಣಕ್ಕಾಗಿ ಮರಗಳನ್ನು ಕಡಿಯುತ್ತಿರುವುದರ ಕುರಿತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಒಂದು ಪತ್ರ ಬರೆಯಿರಿ. 1X5=05**

**VII ಕೆಳಗಿನ ಪದಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. 4X1=04**

1. ಕಾಲ್ಗಡಗ 2. ಎವೆ 3. ನನ್‌ತಾಕ್ 4. ಕಾರ್ಮೋಡ

5. ತಾರತಮ್ಯ 6. ನಿಬ್ಬಣ 7. ವಸಾಹತುಶಾಹಿ 8. ಸಮತೆ

**VIII ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (ಎಲ್ಲ ಆರು ಪ್ರಶ್ನೆಗಳಿಗೆ ಉತ್ತರಿಸಿ) 5X1=05**

**1. ರತ್ನ ಎಲ್ಲಿಯ ತನಕ ಕನ್ನಡ ಪದಗಳನ್ನು ಆಡುತ್ತೇನೆ ಎಂದಿದ್ದಾನೆ?**

ಅ. ಪ್ರಪಂಚ ಇರೋ ತನಕ ಆ. ತಾನು ಇರುವ ತನಕ

ಇ. ಕನ್ನಡ ಇರುವ ತನಕ ಈ. ಮೇಲಿನ ಮೂರೂ ಸಂದರ್ಭಗಳಲ್ಲಿ

**2. ಸ್ವತಂತ್ರ ಮತ್ತು ಮುಕ್ತ ತಂತ್ರಾಂಶಗಳನ್ನು ಇ–ಆಡಳಿತದಲ್ಲಿ ಅಳವಡಿಸಿಕೊಂಡ ಮೊದಲ ರಾಜ್ಯ ಯಾವುದು?**

ಅ. ಮಹಾರಾಷ್ಟ್ರ ಆ. ಕೇರಳ

ಇ. ಗುಜರಾತ್ ಈ. ರಾಜಾಸ್ಥಾನ್

**3. ಬಿದಿರು ಮೆಳೆಗಳು ಸಾಮಾನ್ಯವಾಗಿ ಎಷ್ಟು ವರ್ಷಗಳಿಗೆ ಒಮ್ಮೆ ಹೂ ತಳೆಯುತ್ತವೆ?**

ಅ. 60 ಆ. 100

ಇ. 30 ಈ. 10

**4. ಸಾರಾ ಅಬೂಬಕರ್ ಅವರ ಮಾತೃ ಭಾಷೆ ಯಾವುದು?**

ಅ. ಹಿಂದಿ ಆ. ಕನ್ನಡ

ಇ. ಮಲಯಾಳಂ ಈ. ಉರ್ದು

**5. ಹೊಸ ಆರ್ಥಿಕ ನೀತಿಯ ಎಲ್ಲ ಅವಕಾಶಗಳನ್ನು ತನ್ನದಾಗಿಸಿಕೊಂಡ ವರ್ಗ ಯಾವುದು?**

ಅ. ಮೇಲ್ವರ್ಗ ಆ. ಮಧ್ಯಮ ವರ್ಗ

3. ಮೇಲ್ಮಧ್ಯಮ ವರ್ಗ ಈ. ಕೆಳವರ್ಗ

## ಅನುಬಂಧ 4: ಆಂತರಿಕ ಮೌಲ್ಯಾಂಕನ ಮಾರ್ಗಸೂಚಿ (20 ಅಂಕಗಳಿಗೆ)

ನಿರಂತರ ಮೌಲ್ಯಮಾಪನವನ್ನು ತರಗತಿಗಳಲ್ಲಿ ಜಾರಿ ಇಡುವ ಉದ್ದೇಶದಿಂದ ಬೆಂ.ವಿ.ವಿ. ಮಾರ್ಗಸೂಚಿಗಳ ಅನ್ವಯ ಕನ್ನಡ ಭಾಷಾ ಆಂತರಿಕ ಮೌಲ್ಯಾಂಕನಕ್ಕಾಗಿ ಹಲವು ಉಪಕ್ರಮಗಳನ್ನು ಈ ಕೆಳಕಂಡಂತೆ ನಿಗಧಿಸಲಾಗಿದೆ.

1. ಸೆಮಿಸ್ಟರಿನಲ್ಲಿ ಅಂದಾಜು ಒಟ್ಟು 90 ಕೆಲಸದ ದಿನಗಳು ಇದ್ದು ಅವುಗಳಲ್ಲಿ ಮೊದಲ ನಲವತ್ತೈದು ದಿನಗಳ ಕಲಿಕೆಯ ನಂತರ 10 ಅಂಕಗಳ (ಸಿ–1) ಮತ್ತು ಸೆಮಿಸ್ಟರ್ ಕೊನೆಯ ವಾರದ ಹೊತ್ತಿಗೆ ಇನ್ನುಳಿದ 10 ಅಂಕಗಳ (ಸಿ–2) ಆಂತರಿಕ ಮೌಲ್ಯಾಂಕನ ಮುಗಿಯಬೇಕು.
2. ಘಟಕ ಪರೀಕ್ಷೆಯನ್ನು ಒಂದು ತರಗತಿ ಅವಧಿಯಲ್ಲಿ 5 ಅಂಕಗಳಿಗೆ ನಡೆಸುವುದು.
3. ಸೆಮಿನಾರ್ ಅಥವಾ ಸಹಭಾಗಿ ಕಲಿಕಾ ಚಟುವಟಿಕೆಗೆ 5 ಅಂಕಗಳು.
4. ನಿಯೋಜನಾ ಕಾರ್ಯ ಅಥವಾ ಪ್ರಬಂಧ ರಚನೆಗೆ 5 ಅಂಕಗಳು.
5. ಹಾಜರಾತಿಗೆ 5 ಅಂಕಗಳು.

### ಆಂತರಿಕ ಮೌಲ್ಯಾಂಕನ ಕೋಷ್ಟಕ

| ಆಂತರಿಕ ಮೌಲ್ಯಾಂಕನ ವಿಧಾನ | ಅಂಕಗಳು |
|---|---|
| **ಸಿ–1** | |
| 1. ಘಟಕ ಪರೀಕ್ಷೆ | 05 |
| 2. ಹಾಜರಾತಿ | 05 |
| **ಸಿ–2** | |
| 3. ಸೆಮಿನಾರ್/ಸಹಭಾಗಿ ಕಲಿಕಾ ಚಟುವಟಿಕೆ | 05 |

4. ನಿಯೋಜನಾ ಕಾರ್ಯ/ ಪ್ರಬಂಧ ರಚನೆ 05

---

ಒಟ್ಟು ಅಂಕಗಳು 20

---

## ಅನುಬಂಧ 5:

## ಮಾದರಿ ಪತ್ರಗಳು

### ಔಪಚಾರಿಕ ಪತ್ರದ ಒಂದು ಮಾದರಿ

ಇವರಿಗೆ,

**ಪ್ರಾಂಶುಪಾಲರು** ದಿನಾಂಕ: 12-06-2024

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು

ಕೆಂಗೇರಿ ಉಪನಗರ, ಬೆಂಗಳೂರು-560060

ಇವರಿಂದ,

ಅಬಕಡ

ಪ್ರಥಮ ಬಿ.ಎ. ವಿದ್ಯಾರ್ಥಿ

ಸ.ಪ್ರ.ದ.ಕಾ. ವಿಜಯನಗರ, ಬೆಂಗಳೂರು.

ಮಾನ್ಯರೇ,

**ವಿಷಯ: ವ್ಯಾಸಂಗ ಪ್ರಮಾಣ ಪತ್ರವನ್ನು ಕೋರುವ ಬಗ್ಗೆ :**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ಕೋರುವುದು ಏನೆಂದರೆ; ನಾನು ನಿಮ್ಮ ಕಾಲೇಜಿನ ವಿದ್ಯಾರ್ಥಿ ಆಗಿದ್ದು, ನನ್ನ ಪ್ರವೇಶ ಸಂಖ್ಯೆ 322 ಆಗಿರುತ್ತದೆ. (ಸದರಿ ಪತ್ರದೊಂದಿಗೆ ನನ್ನ ಪ್ರವೇಶ ಶುಲ್ಕದ ರಶೀದಿಯ ಪ್ರತಿಯನ್ನು ಲಗತ್ತಿಸಿದ್ದೇನೆ.) ಹಾಲಿ ನಾನು ತಮ್ಮ ಕಾಲೇಜಿನಲ್ಲಿ ಪ್ರಥಮ ಬಿ.ಎ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ನನಗೆ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ವ್ಯಾಸಂಗ ಪ್ರಮಾಣ ಪತ್ರ ಬೇಕಾಗಿರುತ್ತದೆ. ಆದ್ದರಿಂದ ದಯಮಾಡಿ ನನಗೆ ವ್ಯಾಸಂಗ ಪ್ರಮಾಣ ಪತ್ರವನ್ನು ನೀಡಬೇಕಾಗಿ ಕೋರುತ್ತೇನೆ.

ಇಂತು

ತಮ್ಮ ವಿಧೇಯ ವಿದ್ಯಾರ್ಥಿ

**ಅಡಕ : 1**

ಪ್ರವೇಶ ಶುಲ್ಕದ ರಶೀದಿ ಪ್ರತಿ.

### ಅನೌಪಚಾರಿಕ ಪತ್ರದ ಒಂದು ಮಾದರಿ

ಇವರಿಗೆ,

**ಮಹಮದ್‌ಗೌಸ್‌ರವರು** ದಿನಾಂಕ: 02-02-2024

ತುಪ್ಪಗಾನಹಳ್ಳಿ ಗ್ರಾಮ, ಕಸಬಾ ಹೋಬಳಿ ಬೆಂಗಳೂರು

ಕನಕಪುರ ತಾಲ್ಲೂಕು

ರಾಮನಗರ ಜಿಲ್ಲಾ

ಪಿತೃಸಮಾನರಾದ ಮಹಮ್ಮದಣ್ಣ ಅವರಿಗೆ ನಿಮ್ಮ ಪಕ್ಕದ ಮನೆಯ ಸಿದ್ಧಲಿಂಗಪ್ಪನವರ ಮಗನಾದ ಅಬಕಡ ಮಾಡುವ ನಮಸ್ಕಾರಗಳು. ಅದಾಗಿ ಈಗ ಉಭಯ ಕುಶಲೋಪರಿ ಸಾಂಪ್ರತ. ನಾನು ಇಲ್ಲಿ ಕ್ಷೇಮ, ನೀವೂ ನಿಮ್ಮ ಮನೆಯವರೆಲ್ಲರೂ ಅಲ್ಲಿ ಕ್ಷೇಮವೆಂದು ಭಾವಿಸುವೆ. ನಿಮಗೆ ತಿಳಿದಿರುವಂತೆ ನಾನು ಇಲ್ಲಿ ಹಾಸ್ಟೆಲಿನಲ್ಲಿ ಓದುತ್ತಿದ್ದೇನೆ. ಕಾಲಕಾಲಕ್ಕೆ ಸರಿಯಾಗಿ ತರಗತಿಗಳು ನಡೆಯುತ್ತಿವೆ. ಈ ವಿಚಾರವನ್ನು ನನ್ನ ತಂದೆತಾಯಿಗೆ ತಿಳಿಸಲು ಕೋರುತ್ತೇನೆ.

ಮಹಮದಣ್ಣಾ ಅವರೆ, ನಾನು ಹಿಂದಿನ ವಾರ ಮನೆಗೆ ಬಂದಿದ್ದಾಗ ನನ್ನ ತಂದೆಗೆ ಹುಷಾರು ಇರಲಿಲ್ಲ. ಅವರು ಈಗ ಹೇಗಿದ್ದಾರೆ? ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದ ಅಗತ್ಯ ಬಿದ್ದಲ್ಲಿ ಆಸ್ಪತ್ರೆಗೆ ಒಯ್ಯಿರಿ. ನನ್ನ ಹತ್ತಿರ ಮೊಬೈಲ್ ಇಲ್ಲ. ಏನಾದರೂ ತುರ್ತು ವಿಷಯ ತಿಳಿಸುವುದು ಇದ್ದಲ್ಲಿ ನನ್ನ ಹಾಸ್ಟೆಲಿನ ಲ್ಯಾಂಡ್ ಲೈನಿಗೆ ದಯಮಾಡಿ ಕರೆ ಮಾಡಿರಿ. ನನಗೆ ಇಲ್ಲಿ ಯಾವುದೇ ತೊಂದರೆ ಇಲ್ಲ. ಹಸೀನಮ್ಮ ಅವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ. ತಂದೆಗೆ ಆರೋಗ್ಯದ ಕಡೆ ಗಮನ ಕೊಡಲು ಹೇಳಿ. ನೀವು ನಮ್ಮ ಮನೆಯ ಪಕ್ಕ ಇರುವವರೆಗೆ ನನಗೆ ಒಂದು ಧೈರ್ಯ. ಅಲ್ಲಿನ ಸಮಾಚಾರಕ್ಕೆ ಪತ್ರ ಬರೆಯಿರಿ. ನಮಸ್ಕಾರಗಳು.

ಇಂತು ನಿಮ್ಮ ಪ್ರೀತಿಯ
**ಅಬಕಡ**

## ಅನುಬಂಧ 6:
## ಸಂಕ್ಷೇಪ ಲೇಖನ
### ಕೆಲವು ಸೂಚನೆಗಳು ಮತ್ತು ಮಾದರಿಗಳು

**'ಸಂಕ್ಷೇಪ ಲೇಖನ'** ಎಂದರೆ ದೀರ್ಘವಾದ ಹಾಗೂ ವಿಸ್ತೃತವಾದ ಬರಹವನ್ನು ಕಡಿಮೆಗೊಳಿಸುವುದು, ಮಿತಗೊಳಿಸುವುದು, ಸಾರಾಂಶ ಮಾಡುವುದು ಮುಂತಾದ ಅರ್ಥಗಳಿವೆ. ದೊಡ್ಡ ವ್ಯಾಪ್ತಿಯ ವಿಷಯವನ್ನು ಅಡಕವಾಗಿ ಹೇಳುವಾಗ, ವರದಿ ಮಾಡುವಾಗ, ದಾಖಲೆಗಳನ್ನು ತಯಾರಿಸುವಾಗ ಸಂಕ್ಷೇಪಗೊಳಿಸಿ ಬರೆಯುವುದು ಒಂದು ಕೌಶಲವೇ ಸರಿ. ಯಾವುದೇ ವಿಷಯವನ್ನು ಸಂಕ್ಷೇಪ ಗೊಳಿಸಿ ಬರೆಯುವಾಗ ಮೂಲದ ಅರ್ಥ ಹಾಗೂ ಆಶಯಕ್ಕೆ ಧಕ್ಕೆ ಬಾರದಂತೆ ಬರೆಯಬೇಕಾಗುತ್ತದೆ.

**ಸಂಕ್ಷೇಪ ಲೇಖನ ಮಾಡುವಾಗ ಗಮನಿಸಬೇಕಾದ ಅಂಶಗಳು:**

- ಮೂಲ ಲೇಖನವನ್ನು ಒಂದೆರಡು ಸಲ ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಿ.
- ಮುಖ್ಯವಾದ ಸಾಲುಗಳನ್ನು ಗೆರೆ ಎಳೆದು ಗುರುತು ಮಾಡಿಕೊಳ್ಳಿ.
- ಒಂದೇ ವಿಚಾರವನ್ನು ಹೇಳುವ ಪದ ಅಥವಾ ವಾಕ್ಯಗಳು ಯಾವುವು ಎಂಬುದನ್ನು ಗುರುತಿಸಿಕೊಳ್ಳಿ.
- ಪುನರಾವರ್ತನೆ ಆಗಿರುವ ಪದ/ವಾಕ್ಯಗಳಲ್ಲಿ ಅಗತ್ಯವಾದುದನ್ನು ಮಾತ್ರ ಉಳಿಸಿಕೊಳ್ಳಿ.
- ಉದ್ದನೆಯ ವಾಕ್ಯಗಳನ್ನು ಅರ್ಥಭಂಗವಾಗದಂತೆ ಮೊಟಕುಗೊಳಿಸಿ.
- ವಾಕ್ಯದಲ್ಲಿ ಪೂರ್ಣಾರ್ಥ ಸಾಧ್ಯವಾಗಲು ಅನಿವಾರ್ಯವೆನಿಸಿದರೆ, ಮೂಲ ಲೇಖನದ ಆಶಯಕ್ಕೆ ತೊಂದರೆಯಾಗದಂತೆ ಎಚ್ಚರ ವಹಿಸಿ ಹೊಸ ಪದಗಳನ್ನು ಸೇರಿಸಿ.
- ವಾಕ್ಯಗಳ ನಡುವೆ ಸುಸಂಬದ್ಧತೆ ಇರಲಿ.
- ಮೂಲಲೇಖನದಲ್ಲಿರುವ ಪ್ರಮುಖ ಹೆಸರುಗಳು, ಅಂಕಿ-ಅಂಶಗಳು ದಿನಾಂಕ/ಇಸವಿಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಿ.
- ಸಂಕ್ಷಿಪ್ತತೆ, ಸಂಗ್ರಹಗುಣ, ಸ್ಪಷ್ಟತೆ ಮೂರೂ ಜೊತೆಗಿರಲಿ.
- ಲೇಖನದ ಪೂರ್ಣ ಆಶಯವನ್ನು ಬಿಂಬಿಸುವಂತಹ ಸೂಕ್ತ ಶೀರ್ಷಿಕೆಯನ್ನು ಕೊಡಿ.
- ಮೂಲ ಲೇಖನವನ್ನು ಮೂರನೇ ಒಂದರಷ್ಟು ಗಾತ್ರಕ್ಕೆ ಇಳಿಸುವಾಗ ಪದಗಳ ಸಂಖ್ಯೆಯನ್ನು ಗಮನಿಸಿಕೊಳ್ಳಿ.

* * *

### ಸಂಕ್ಷೇಪ ಲೇಖನದ ಮಾದರಿ-1

**ಮೂಲ ಬರಹ:**

ಒಂದು ಕಾಡಿನ ನಿವಾಸಿಗಳಾಗಿದ್ದ ಕಪ್ಪೆಗಳಲ್ಲಿ ಕೆಲವು ಒಂದು ದಿನ ಆಹಾರ ಹುಡುಕಿಕೊಂಡು ಕುಪ್ಪಳಿಸುತ್ತ ಗುಂಪಾಗಿ ಹೋಗುತ್ತಿದ್ದವು. ಅವುಗಳಲ್ಲಿ ಎರಡು ಆಯ ತಪ್ಪಿ ದಾರಿಯಲ್ಲಿದ್ದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು. ಮಿಕ್ಕ ಕಪ್ಪೆಗಳು ಹಳ್ಳದ ಸುತ್ತ ಗುಂಪು ಕೂಡಿದವು. ಇಣುಕಿ ನೋಡಿದವು. ಹಳ್ಳವು ಆಳವಾಗಿತ್ತು. ಒಳಗೆ ಬಿದ್ದ ನತದೃಷ್ಟ ಕಪ್ಪೆಗಳನ್ನು ಕುರಿತು, "ಇಷ್ಟು ಆಳದ ಹಳ್ಳದಿಂದ ಹೇಗೆ ಮೇಲಕ್ಕೆ ಬರುತ್ತೀರಿ? ನಿಮ್ಮ ಕತೆ ಮುಗೀತು" ಎಂದು ಒಕ್ಕೊರಲಿನಿಂದ ವಟಗುಟ್ಟಿದವು.

ಒಳಗೆ ಬಿದ್ದ ಕಪ್ಪೆಗಳು ಪ್ರಾಣ ಉಳಿಸಿಕೊಳ್ಳಲು ಜಿಗಿದಾಡಿದಂತೆಲ್ಲ, ಹಳ್ಳದ ಮೇಲೆ ಸುತ್ತುವರೆದು ಕುಳಿತಿದ್ದ ಕಪ್ಪೆಗಳು, "ನೀವು ಮೇಲೆ ಬರುವುದು ಸಾಧ್ಯವೇ ಇಲ್ಲ. ಸುಮ್ಮನೇ ಯಾಕೆ ಎಗರಾಡಿ ಮೈ ನೋಯಿಸಿಕೊಳ್ಳುತ್ತೀರಿ. ನೀವು ಸತ್ತಂತೆಯೇ ಸರಿ. ವ್ಯರ್ಥ ಪ್ರಯತ್ನ" ಎಂದು ಮತ್ತೆ ಮತ್ತೆ ವಟಗುಟ್ಟುತ್ತಲೇ ಇದ್ದವು.

ಹಳ್ಳದ ಮೇಲಿನಿಂದ ಕಪ್ಪೆಗಳು ಸಾಮೂಹಿಕವಾಗಿ ಪದೇ ಪದೇ ವಟಗುಟ್ಟುತ್ತ ಹಳ್ಳದೊಳಗಿನ ಕಪ್ಪೆಗಳ ಪ್ರಯತ್ನವನ್ನು ನಿರುತ್ಸಾಹಗೊಳಿಸುತ್ತಿದ್ದವು. ತಳದಲ್ಲಿ ಜಿಗಿದಾಡುತ್ತಿದ್ದ ಒಂದು ಕಪ್ಪೆಯು ತಾನು ಹೋರಾಡಿ ಪಾರಾಗಬಲ್ಲೆ ಎನ್ನುವ ಅಂತಃ ಸ್ಥೈರ್ಯವನ್ನೇ ಕಳೆದುಕೊಂಡಿತು. ಮೃತ್ಯುಕೂಪದಿಂದ ಹೊರ ಬರಲಾರೆ ಎನಿಸಿ ಎದೆ ಹಾರಿ ಅಸುನೀಗಿತು.

ಇನ್ನೂ ಜೀವಂತವಾಗಿದ್ದ ಕಪ್ಪೆಯು ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಕಪ್ಪೆಗಳು ಮೇಲಿನಿಂದ "ನಿನ್ನ ಕತೆಯೂ ಅಷ್ಟೇ" ಎಂದು ನಿರಾಶಾವಾದದ ಬಲೆಯನ್ನು ನೇಯುತ್ತಿದ್ದವು. "ಜಿಗಿದಷ್ಟೂ ಮೈ ನೋಯಿಸಿಕೊಳ್ಳುತ್ತೀ, ಅಷ್ಟೇ. ನೋವುಂಡು ಸಾಯುವ ಬದಲು ನಿನ್ನ ಸ್ನೇಹಿತನಂತೆ ನೋವಿಲ್ಲದ ಸಾವನ್ನು ಒಪ್ಪಿಕೊಳ್ಳುವುದೇ ಮೇಲು" ಎಂದು ಅದೆಷ್ಟು ಸಲ ಹೇಳಿದವೋ! ಆದರೆ ಆ ಕಪ್ಪೆಯು ಮತ್ತಷ್ಟು ಶಕ್ತಿ ಕೂಡಿಸಿಕೊಂಡು ಪ್ರಯತ್ನವನ್ನು ಮುಂದುವರೆಸಿ ಹಳ್ಳದ ದಡ ಸೇರಿ ಬಚಾವಾಯಿತು.

ಮೇಲಕ್ಕೆ ಬಂದ ಕಪ್ಪೆಯನ್ನು ಮಿಕ್ಕ ಕಪ್ಪೆಗಳು ಸುತ್ತುವರೆದವು. ತಮ್ಮ ಮಾತುಗಳಿಗೆ ಲಕ್ಷ್ಯಕೊಡದೆ ಕೊನೆಗೂ ಸಾವಿನ ದವಡೆಯಿಂದ ಪಾರಾಗಿ ಬಂದ ಆ ಕಪ್ಪೆಯನ್ನು ಕುರಿತು, "ಎಷ್ಟು ಪ್ರಯತ್ನಿಸಿದರೂ ನೀನು ಬದುಕಲಾರೆ ಎಂದು ನಾವು ಹೇಳುತ್ತಿದ್ದೆವು. ನಿನಗೆ ಕೇಳಿಸುತ್ತಿರಲಿಲ್ಲವೇ?" ಎಂದು ಕೇಳಿದವು. ಆ ಕಪ್ಪೆಯು ನಿಟ್ಟುಸಿರು ಬಿಡುತ್ತಾ "ಎಲ್ಲರೂ ಸೇರಿ ಏನೋ ವಟಗುಟ್ಟುತ್ತಿದ್ದೀರಿ ಅನ್ನಿಸುತ್ತಿತ್ತು. ನನಗೆ ಕಿವಿ ಕೇಳಿಸುವುದಿಲ್ಲ. ಬಹುಶಃ ಪ್ರಯತ್ನವನ್ನು ಬಿಡದೆ ಮುಂದುವರಿಸುವಂತೆ ನನ್ನಲ್ಲಿ ಉತ್ಸಾಹ ತುಂಬುತ್ತಿದ್ದೀರಿ ಎಂದು ಕೊಂಡು ಪ್ರಯತ್ನವನ್ನು ಮುಂದುವರಿಸಿದೆ. ಧನ್ಯವಾದಗಳು" ಎಂದು ಹೇಳಿ ಮುಂದಕ್ಕೆ ಕುಪ್ಪಳಿಸಿತು. ಅವಾಕ್ಕಾದ ಮಿಕ್ಕ ಕಪ್ಪೆಗಳು ಅದನ್ನು ಹಿಂಬಾಲಿಸಿದವು. (ಒಟ್ಟು ಪದಗಳು–207)

**ಸಂಕ್ಷೇಪಿತ ಬರಹ**

ಕಾಡಿನಲ್ಲಿ ಎರಡು ಕಪ್ಪೆಗಳು ಆಳವಾದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು. ಮೇಲೆ ಬರಲು ಜಿಗಿದಾಡುತ್ತಿದ್ದ ಅವುಗಳನ್ನು ಕಂಡು ಮೇಲ್ಭಾಗದಲ್ಲಿದ್ದ ಕಪ್ಪೆಗಳು "ನೀವು ಮೇಲೆ ಬರಲು ಸಾಧ್ಯವೇ ಇಲ್ಲ. ವ್ಯರ್ಥ ಪ್ರಯತ್ನ ಮಾಡುತ್ತಿದ್ದೀರಿ. ನಿಮ್ಮ ಕತೆ ಮುಗೀತು" ಎಂದವು.

ಅವುಗಳ ನಿರುತ್ಸಾಹದ ಮಾತುಗಳಿಂದ ಒಂದು ಕಪ್ಪೆ ಭರವಸೆಯನ್ನೇ ಕಳೆದುಕೊಂಡು ಭಯದಿಂದ ಸತ್ತು ಹೋಯಿತು. ಇನ್ನೊಂದು ಅವುಗಳ ನಿರುತ್ಸಾಹದ ಮಾತನ್ನು ಗಮನಿಸದೆ ನಿರಂತರ ಪ್ರಯತ್ನದಿಂದ ಹಳ್ಳದ ದಡ ಸೇರಿ ಬದುಕಿತು.

ಆಗ ಮಿಕ್ಕ ಕಪ್ಪೆಗಳು "ನೀನೆಷ್ಟು ಪ್ರಯತ್ನಿಸಿದರೂ ಬದುಕಲಾರೆ ಎಂದು ಹೇಳುತ್ತಿದ್ದೆವು. ಕೇಳಿಸುತ್ತಿರಲಿಲ್ಲವೇ?" ಎಂದವು. ಆಗ ಅದು "ನನಗೆ ಕಿವುಡು. ನೀವೆಲ್ಲರೂ ಏನೋ ವಟಗುಟ್ಟುತ್ತ ಉತ್ಸಾಹ ತುಂಬುತ್ತಿದ್ದೀರಿ ಎಂದುಕೊಂಡೆ. ಧನ್ಯವಾದಗಳು" ಎಂದಾಗ ಅವು ಅವಾಕ್ಕಾದವು. (ಒಟ್ಟು ಪದಗಳು–69)

**ಮಾದರಿ ಶೀರ್ಷಿಕೆ: ಭರವಸೆಯೇ ಬದುಕು**

**ಸಂಕ್ಷೇಪಿಸಿದ ಬರಹವನ್ನು ಆಧರಿಸಿದ ಎರಡು ಪ್ರಶ್ನೆಗಳು:**

1. ಹಳ್ಳದಿಂದ ಮೇಲೆ ಬರಲು ಯತ್ನಿಸುತ್ತಿದ್ದ ಕಪ್ಪೆಗಳನ್ನು ದಡದ ಮೇಲಿದ್ದ ಕಪ್ಪೆಗಳು ಹೇಗೆ ನಿರುತ್ಸಾಹಗೊಳಿಸುತ್ತಿದ್ದವು?
2. ಒಂದು ಕಪ್ಪೆ ಹಳ್ಳದಲ್ಲಿಯೇ ಪ್ರಾಣ ಬಿಡಲು ಹಾಗೂ ಇನ್ನೊಂದು ಯಶಸ್ವಿಯಾಗಿ ಮೇಲೆ ಬರಲು ಕಾರಣವೇನು?

* * *

**ಸಂಕ್ಷೇಪ ಲೇಖನದ ಮಾದರಿ 2**

ಕುದುರೆ ಮುಖದ ಗಣಿಗಾರಿಕೆಯಿಂದ ಚಿನ್ನ ಸಿಗುವುದಾದರೂ ನಮಗದು ಬೇಕಾಗಿಲ್ಲ ಎಂದು ನಾವು ತಿಳಿದುಕೊಂಡು ವರ್ತಿಸಬೇಕು. ನಿತ್ಯ ದುಡಿಯುವ ಒಬ್ಬ ಮನುಷ್ಯ ಮತ್ತೆ ನಾಳೆ ದುಡಿಯಲು ಬೇಕಾಗುವ ಆಹಾರವನ್ನು ಸಂಪಾದಿಸುತ್ತಾನೆ. ಹೀಗೆ ದುಡಿಮೆಯಿಂದ ಶಕ್ತಿಯನ್ನು ಪಡೆದು ಅದನ್ನು ದುಡಿಮೆಗೇ ವಿನಿಯೋಗಿಸುತ್ತಾ ಇರುವ ನಮ್ಮ ಅಸಂಖ್ಯ ದುಡಿಮೆಗಾರರು ಪರಾಗಸ್ಪರ್ಶಕ್ಕೆ ಕಾದಿರುವ ಹೂವಿನಂತಿರುತ್ತಾರೆ. ಯಾವುದೋ ದುಂಬಿ ಆಕಸ್ಮಿಕವಾಗಿ ತನ್ನನ್ನು ಬಂದು ಮುಟ್ಟೀತೆನ್ನುವ ಭರವಸೆಯಲ್ಲಿ, ಗಾಳಿಯಲ್ಲಿ ಅಲ್ಲಾಡುತ್ತಾ ಇರುವ ಹೂವಿನ ಹಾಗೆ ಇದ್ದು ಬಿಡುತ್ತಾರೆ. ಯಾವುದೇ ದೈವ ತಮ್ಮನ್ನು ಬಂದು ಮುಟ್ಟೀತೆನ್ನುವ ಭರವಸೆಯಲ್ಲಿ, ಹರಕೆಯಲ್ಲಿ ಬಾಳುತ್ತಾ ನದಿಗಳ ಸಂಗಮದಲ್ಲಿ ಸಹಸ್ರ ಸಂಖ್ಯೆಯಲ್ಲಿ ಮೀಯುತ್ತಾ, ಕಾಲ್ನಡಿಗೆಯಲ್ಲಿ ಯಾತ್ರೆ ಮಾಡುತ್ತಾ ಇರುವ ಅಪಾರ ಜನ ಕೋಟಿ ನಮ್ಮ ದಿನನಿತ್ಯದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡಬಲ್ಲರು. ದೇವರು ಇದ್ದಾನೋ ಇಲ್ಲವೋ ತಿಳಿಯದು. ಪ್ರಾಯಶಃ ಅವನನ್ನು ಮುಟ್ಟುವ ಭರವಸೆಯಲ್ಲಿ ಎಲ್ಲರೂ ಕೊನೆಗೆ ಸಾಯುವುದೇನೋ? ಹೀಗೆ ನಿತ್ಯದ ದುಡಿಮೆಯ ಕಾಯಕ ಮತ್ತು ಅಗೋಚರವಾದದ್ದರ ಭರವಸೆಯ ಈ ಜೀವನದಲ್ಲಿ ಭಾರತದ ಅಪಾರ ಜನಸಂಖ್ಯೆಗೆ ನಿಜವಾಗಿ ಸುಖ ಸಿಗುವುದು ಮಕ್ಕಳ ಪಾಲನೆ, ಲಾಲನೆ, ಹಬ್ಬ ಹರಿದಿನಗಳ ಊಟ, ಕೊಂಚ ಬಿಡುವಿದ್ದಾಗ ನಡೆಯುವ ಕಾಡು ಹರಟೆ ಇವುಗಳಲ್ಲೇ.

ಇದನ್ನು ಈ ಸಂದರ್ಭದಲ್ಲಿ ಮಾತಾಡುವುದೇ ಓದುಗರಿಗೆ ವಿಚಿತ್ರ ಅನ್ನಿಸಬಹುದು. ಆದರೆ ಬದುಕಿನ ಈ ಸ್ಥಾಯೀ ಸ್ವರೂಪವನ್ನು ಮತ್ತುಅದರ ಸಂಚಾರೀ ಕನಸುಗಳನ್ನು, ಭರವಸೆಗಳನ್ನು ಹೃದಯದಲ್ಲಿ ಅರಿತು ದುಡಿಯುವವರಿಗೆ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಈಚಿನ ಅನೇಕ ಯೋಜನೆಗಳು ಕ್ರಿಮಿನಲ್ ವಿಚಾರವಾಗಿ ಭಾಸವಾಗುತ್ತದೆ. ವೇಗವಾಗಿ ಹೋಗುವ ಕಾರುಗಳಿಗಾಗಿ ನಾವು ಮಾಡುವ ರಸ್ತೆಗಳನ್ನು ಕಂಡಾಗ ಒಬ್ಬ ಮುದುಕ, ಮುದುಕಿ ಅಥವಾ ಒಂದು ಮಗು ರಸ್ತೆಯ ಈ ಬದಿಯಿಂದ ಇನ್ನೊಂದು ಬದಿಗೆ ಹೋಗುವುದೇ ಅಸಾಧ್ಯವಲ್ಲವೇ ಅನ್ನುವ ಸಂಕಟ ಉಂಟಾದರೆ ನಾವು ಮನುಷ್ಯರು. ಬದಲಾಗಿ ಎಷ್ಟು ವೇಗವಾಗಿ ಒಂದು ಕಾರು ಸಂಚರಿಸಬಲ್ಲದು ಎಂದು ಯೋಚಿಸಿದರೆ ನಾವು ರಾಕ್ಷಸರು.

**ಮಾದರಿ ಸಂಕ್ಷೇಪಿತ ಲೇಖನ**

ಯಾವುದೆ ಗಣಿಗಾರಿಕೆಯನ್ನು ನಾವು ಲಾಭಕ್ಕಾಗಿ ಮಾಡಬಾರದು. ಆಸ್ತಿಕರಾದ ಜನ ಸದಾ ಒಳ್ಳೆಯ ಕೆಲಸಗಳನ್ನೆ ಮಾಡುತ್ತ ಲಾಭಕ್ಕಾಗಿ ಆಸೆಪಡದೆ, ಪ್ರಕೃತಿಗು ಹಾನಿ ಮಾಡದೆ ಸರಳವಾಗಿ ಬದುಕುತ್ತಾರೆ. ಅದು ನಮಗೆ ಮಾದರಿ ಆಗಬೇಕು. ಕುಟುಂಬದ ಸೌಖ್ಯ, ಹಬ್ಬ, ಊಟ, ತಿಂಡಿಗಳಲ್ಲೆ ನಮ್ಮವರು ಆನಂದ ಕಾಣುತ್ತಾರೆ. ಹೀಗಿರುವಾಗ ಹೆಚ್ಚಿನ ಆದಾಯವನ್ನೆ ನೆಚ್ಚಿ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಗಳನ್ನೆ ನಾವು ಆರಾಧಿಸಬಾರದು. ಬದುಕಿನ ಸ್ಥಾಯಿ ಆಶಯ ಮತ್ತು ಕನಸುಗಳನ್ನು, ಭರವಸೆಗಳನ್ನು ಅರಿತು ದುಡಿಯುವವರಿಗೆ ಇಂತಹ ಯೋಜನೆಗಳು ನಿಜವಾಗಿಯು ಕ್ರಿಮಿನಲ್ ಆಗಿಯೆ ಕಾಣುತ್ತವೆ. ನಮ್ಮ ಪ್ರಗತಿಯನ್ನು ನಾವು ಮಾನವೀಯವಾಗಿ ಯೋಚಿಸಬೇಕು.

ಸಂಕ್ಷೇಪಿಸಿದ ಲೇಖನದ ಶೀರ್ಷಿಕೆ: **ಮಾನವೀಯ ಪ್ರಗತಿ**

ಸಂಕ್ಷೇಪಿಸಿದ ಲೇಖನವನ್ನು ಆಧರಿಸಿದ ಎರಡು ಪ್ರಶ್ನೆಗಳು:

1. ಗಣಿಗಾರಿಕೆಯನ್ನು ನಾವು ಯಾವದೃಷ್ಟಿಯಿಂದ ಮಾಡಬಾರದು?
2. ನಮ್ಮ ಪ್ರಗತಿಯ ಮಾನದಂಡ ಏನಾಗಿರಬೇಕು? ಏಕೆ? ವಿವರಿಸಿ.

## ಅನುಬಂಧ 7

## ಚಟುವಟಿಕೆಗಳ ಯಾದಿ

### ಚಟುವಟಿಕೆಗಳ ಮತ್ತು ಅಪೇಕ್ಷಿತ ಫಲಿತಗಳ ಯಾದಿ

ಕೆಲವು ಸಂಭಾವ್ಯ ಮತ್ತು ಕಾರ್ಯಸಾಧ್ಯ ಚಟುವಟಿಕೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ. ನಿಮ್ಮ ನಿಮ್ಮ ಪಠ್ಯಗಳ ಕೊನೆಯಲ್ಲಿ ಮತ್ತು ಅಧ್ಯಾಯ ವಾರು ಚಟುವಟಿಕೆಗಳನ್ನು ಕೊಡುವಾಗ ಇವುಗಳಲ್ಲಿ ಬೇಕಾದವನ್ನು ಆಯ್ದು/ರೂಪಾಂತರಿಸಿ ಬಳಸಬಹುದು. ಅಥವಾ ಇವುಗಳನ್ನು ಹಿನ್ನೆಲೆಯಲ್ಲಿ ಇರಿಸಿಕೊಂಡು ನಿಮ್ಮ ಪಠ್ಯದ ಉದ್ದೇಶ ಮತ್ತು ಅಪೇಕ್ಷಿತ ಫಲಿತಗಳಿಗೆ ಅನುಗುಣವಾಗಿ ಹೊಸ ಚಟುವಟಿಕೆಗಳನ್ನು ರೂಪಿಸಬಹುದು. ಕಲಿಕೆಯನ್ನು ಆಗು ಮಾಡುವ ಅಧ್ಯಾಪಕರು ತಮ್ಮದೇ ಚಟುವಟಿಕೆಗಳ ಯಾದಿಯನ್ನು ತಯಾರಿಸಿಕೊಳ್ಳಬಹುದು. (ಸದರಿ ಪಟ್ಟಿಯು ಅಕಾರಾದಿಯಲ್ಲಿದೆ)

| ಕ್ರಸಂ | ಚಟುವಟಿಕೆಗಳು | ಉದ್ದೇಶ, ಉದ್ದೇಶಿತ ಕೌಶಲ, ಅಪೇಕ್ಷಿತ ಫಲಿತಗಳು |
|---|---|---|
| 1. | ಅಧ್ಯಾಪಕರ ಅನುಕರಣೆ | –ಮಾತಿನ ಕೌಶಲ, ನೆನಪಿನ ಶಕ್ತಿಯ ವೃದ್ಧಿ... |
| 2. | ಅಪೇಕ್ಷಿತ ಚಟುವಟಿಕೆಗಳ ಯಾದಿ ತಯಾರಿಸುವ ಚಟುವಟಿಕೆ | –ಪಾಂಡಿತ್ಯ, ಸ್ವತಂತ್ರಚಿಂತನೆ, ವಿಮರ್ಶಾ ಪ್ರಜ್ಞೆ |
| 3. | ಅರಳಿಕಟ್ಟೆ, ಗ್ರಾಮಸಭೆ ಕಲಾಪ, ಶಾಸನಸಭೆ ಕಲಾಪ, ನ್ಯಾಯಾಂಗ ಕಲಾಪ, ಬ್ಯಾಂಕ್ ವಹಿವಾಟು, ಅಂಚೆಕಛೇರಿ ವಹಿವಾಟು ಇತ್ಯಾದಿಗಳ ಅಣಕು ಪ್ರದರ್ಶನಗಳು | –ಲೋಕಬಳಕೆಯ ಪರಿಚಯ, ಬಳಕೆಯ ಜ್ಞಾನ, ಉದ್ಯೋಗ ಕೌಶಲ. |
| 4. | ಆಟವೊಂದರ ಕಾಲ್ಪನಿಕ ವೀಕ್ಷಕವಿವರಣೆ | –ಮಾತಿನಕೌಶಲ, ಕಲ್ಪನಾಶಕ್ತಿ, ಗ್ರಹಿಕೆ ಮತ್ತು ಅಭಿವ್ಯಕ್ತಿ ಕೌಶಲ |
| 5. | ಆಡಳಿತ ಕನ್ನಡ, ವಿಜ್ಞಾನಕನ್ನಡ, ನ್ಯಾಯಾಂಗ ಕನ್ನಡ ಇತ್ಯಾದಿ ಬಳಕೆಯ ಮಾದರಿಗಳ ಪರಿಚಯ, ಅಭ್ಯಾಸ | –ಬಳಕೆಯ ಭಾಷೆಯ ಗ್ರಹಿಕೆ ಮತ್ತು ಜ್ಞಾನ ಭಿನ್ನ ವಲಯಗಳ ಜ್ಞಾನ, |

| | | |
|---|---|---|
| 6. | ಆಡಿಯೋಕಾಮೆಂಟರಿ ಟು ವಿಡಿಯೋಸ್ | – ದೃಶ್ಯ ವಿಶ್ಲೇಷಣಾ ಸಾಮರ್ಥ್ಯ, ಪ್ರಸಂಗ, ವರ್ತನೆ ಸಂಬಂಧಗಳ ವಿಶ್ಲೇಷಣಾ ಸಾಮರ್ಥ್ಯ |
| 7. | ಆ ರಾಗಕ್ಕೆ ಈ ಹಾಡು(ಒಂದು ರಾಗಕ್ಕೆ ಇನ್ನೊಂದು ಹಾಡು) | – ರಾಗ ಸಂಯೋಜನ ಪ್ರಜ್ಞೆ, ಸಾಹಿತ್ಯ ರಚನಾ ಪ್ರತಿಭೆ ತರ್ಕಶಕ್ತಿ, ಸ್ವತಂತ್ರ ಆಲೋಚನೆ |
| 8. | ಆಶುಭಾಷಣ, ಚರ್ಚೆ | –ಶೀಘ್ರಚಿಂತನಾ ಸಾಮರ್ಥ್ಯ |
| 9. | ಈ ಕವಿತೆಯನ್ನು ನೀವು ಬಲ್ಲ ಭಾಷೆಗೆ ತರ್ಜುಮೆ ಮಾಡಿ | – ಭಾಷಾಂತರ ಕೌಶಲ |
| 10. | ಈ ಅನಿಮೇಶನ್ ಚಿತ್ರ ನೋಡಿ ಸಂಭಾಷಣೆ ಬರೆಯಿರಿ | –ಬರಹ ಕೌಶಲ, ಸೃಜನಶೀಲತೆ |
| 11. | ಈ ನಾಟಕವನ್ನು ನೋಡಿ ಲೈವ್‌ಕಾಮೆಂಟರಿ ನೀಡಿ | –ವಿಶ್ಲೇಷಣಾ ಸಾಮರ್ಥ್ಯ, ರಂಗಪ್ರಜ್ಞೆ |
| 12. | ಈ ಸಿನೆಮಾವನ್ನು ನೋಡಿ ಸಬ್‌ಟೈಟಲ್ ಬರೆಯಿರಿ | –ಭಾಷಾಂತರ ಕೌಶಲ, ಗ್ರಹಿಕೆ–ಆಲಿಕೆ–ಅಭಿವ್ಯಕ್ತಿ ಕೌಶಲ |
| 13. | ಈ ಪಠ್ಯಭಾಗದಲ್ಲಿ ಇರುವ ಕಠಿಣ ಪದಗಳನ್ನು ಪಟ್ಟಿ ಮಾಡಿ, ತರಗತಿಯಲ್ಲಿ ಅರ್ಥಚರ್ಚೆ ನಡೆಸಿ | –(ವೊಕ್ಯಾಬುಲರಿ) ಪದಕೋಶ ವೃದ್ಧಿ, ಸಮನಾರ್ಥಕ ಜ್ಞಾನ |
| 14. | ಈ ಪಠ್ಯಭಾಗವನ್ನು ಆಧರಿಸಿ ಒಂದು ಪ್ರಶ್ನೆಪತ್ರಿಕೆ ತಯಾರಿಸಿ | – ಪ್ರಶ್ನೆ ರೂಪಿಸುವ ಕೌಶಲ, ಉತ್ತರ ಅಂದಾಜಿಸುವ ಕೌಶಲ |
| 15. | ಈ ಪಠ್ಯವನ್ನು ಸಾಮೂಹಿಕವಾಗಿ ವಾಚಿಸಿ, ಪಠಿಸಿ | –ವಾಚನ, ಪಠಣ ಕಲೆ, ವಾಚನ ವೇಗವೃದ್ಧಿ, ಸಮುದಾಯ ಪ್ರಜ್ಞೆ |
| 16. | ಉಕ್ತಲೇಖನ | – ಬರಹ ಕೌಶಲ, ಭಾಷಾ ಗ್ರಹಿಕೆ, ಆಲಿಕೆ |
| 17. | ಒಗಟು, ಒಡಪುಗಳನ್ನು ಒಡ್ಡುವುದು ಮತ್ತು ಬಿಡಿಸುವುದು | –ಸೃಜನಶೀಲತೆ, ಮನೋವಿಕಾಸ, –ತರ್ಕಶಕ್ತಿ, ಆಲೋಚನಾ ಶಕ್ತಿ, ವಿಶ್ಲೇಷಣಾ ಶಕ್ತಿವೃದ್ಧಿ |
| 18. | ಒನ್ ಲೈನ್ ಸ್ಟೋರಿ ರೈಟಿಂಗ್ (ಒಂದು ಸಾಲಿನಲ್ಲಿ ಕಥನ ರಚಿಸುವುದು) | –ಕಥನ ಕೌಶಲ, ಸೃಜನಶೀಲತೆ, ಬರಹದ ಕೌಶಲ, ಕಲ್ಪನಾ ಶಕ್ತಿ, ದೃಶ್ಯಪ್ರಜ್ಞೆ |
| 19. | ಕಥನದ ಸಂಭಾಷಣಾ ರಚನೆ | –ದೃಶ್ಯಪ್ರಜ್ಞೆ, ರಂಗಪ್ರಜ್ಞೆ, ಪದಕೋಶ ವೃದ್ಧಿ |
| 20. | ಕಥನದ ಕವನೀಕರಣ | –ಸೃಜನಶೀಲತೆ, ಕಲ್ಪನಾ ಶಕ್ತಿ, ರೂಪಾಂತರ ಸಾಮರ್ಥ್ಯ |
| 21. | ಕಥೆ ಹೇಳುವುದು, ಖೋಖೋ ಕಥನ | –ಸೃಜನಶೀಲತೆ, ಕಲ್ಪನಾ ಶಕ್ತಿ, ಸಮುದಾಯ ಪ್ರಜ್ಞೆ |
| 22. | ಕನ್ನಡ ಗಣಕ ಪರಿಭಾಷಾಕೋಶ ರಚಿಸಿ, ಚರ್ಚಿಸಿ | –ತಂತ್ರಜ್ಞಾನದಲ್ಲಿ ಕನ್ನಡ ಬಳಕೆಯ ಸಾಮರ್ಥ್ಯ |
| 23. | ಕಲ್ಪನಾ ಲಹರಿಯ ನಿರೂಪಣೆ | – ಸೃಜನಶೀಲತೆ, ಕಲ್ಪನಾ ಶಕ್ತಿ, ನಿರೂಪಣಾ ಕೌಶಲ |
| 24. | ಕವನದ/ಕಾವ್ಯದ ಕಥನೀಕರಣ | –ಸೃಜನಶೀಲತೆ, ಕಲ್ಪನಾ ಶಕ್ತಿ, ರೂಪಾಂತರ ಸಾಮರ್ಥ್ಯ |
| 25. | ಕವಿತೆ, ಕಿರುಕಥನ, ಲೇಖನಗಳ ವಿಸ್ತಾರೀಕರಣ | –ಪದಕೋಶ ವೃದ್ಧಿ, ಹೊಸದಾಗಿ ಆಲೋಚಿಸಬಲ್ಲ ಸಾಮರ್ಥ್ಯ |
| 26. | ಕವಿತೆಯ ರಚನೆ, ಹಾಡಿನ ರಚನೆ ಸೃಜನಶೀಲತೆ, ಕಲ್ಪನಾ ಶಕ್ತಿ, | – ರಂಜನಾ ಶಕ್ತಿ, ಸ್ವತಂತ್ರ ಚಿಂತನೆ |
| 27. | ಕೊಟ್ಟಿರುವ ಒಂದೊಂದು ಪದಗಳಿಗೆ ನಿಮ್ಮದೇ ಇನ್ನೊಂದು ಪದ ಸೇರಿಸಿ ಹೊಸ ಪದ ರಚಿಸಿ | –ಪದಕೋಶ ವೃದ್ಧಿ, ಭಾಷೆಯ ಉತ್ಪಾದಕ ಶಕ್ತಿ ವೃದ್ಧಿ |
| 28. | ಗಮಕ ವಾಚನ, ತಾಳಮದ್ದಳೆ, ನಾಟಕ, ನಾಟಕದ ಗೆಜ್ಜೆಪೂಜೆ ಇತ್ಯಾದಿಗಳ ಆಲಿಕೆ ಮತ್ತು ಪ್ರಯೋಗ | –ಸಮುದಾಯ ಪ್ರಜ್ಞೆ, ಆಲಿಕೆ–ಗ್ರಹಿಕೆ ವಿಶ್ಲೇಷಣೆ, ಸಂಯುಕ್ತ ಕಲಾಪ್ರಜ್ಞೆ, ತೌಲನಿಕತೆ |
| 29. | ಗಾದೆಗಳ ಸೃಷ್ಟಿ–ಸಂಪಾದನೆ– ಚರ್ಚೆ | –ಭಾಷಾ ಉತ್ಪಾದಕತೆ, ವಿಶ್ಲೇಷಣೆ, ಅಭಿವ್ಯಕ್ತಿ ಕೌಶಲ |

| | |
|---|---|
| 30. ಗುಲ್ಬರ್ಗ ಆಡು ಕನ್ನಡದ ಧ್ವನಿ ಮುದ್ರಿಕೆ ಕೇಳಿ ನಿಮ್ಮ ಪ್ರಾದೇಶಿಕ ನುಡಿಗೆ ಅದನ್ನು ತಿರುಗಿಸಿ | –ಭಾಷಾ ಪ್ರಭೇದ ಗ್ರಹಿಕೆ ಕೌಶಲ, ಪ್ರಭೇದ ಜಿಗಿತ ಕೌಶಲ |
| 31. ಚಿತ್ರರಚನೆ (ರೇಖಾಚಿತ್ರ, ಚುಕ್ಕಿ ಚಿತ್ರ, ವರ್ಣಚಿತ್ರ ಇತ್ಯಾದಿ) | –ಚಿತ್ರಕಶಕ್ತಿ, ಚಿಂತನಾ ಶಕ್ತಿ, ಕಲ್ಪನಾ ಶಕ್ತಿ, ಲೋಕಗ್ರಹಿಕೆ |
| 32. ಚಿತ್ರ ನೋಡಿಕತೆ/ಕವಿತೆ ರಚಿಸಿ | – ಕಲ್ಪನಾ ಶಕ್ತಿ, ಸೃಜನಶೀಲ ಸಾಮರ್ಥ್ಯ ವೃದ್ಧಿ |
| 33. ಜನಪದ ಕಥೆ ಒಂದರ ನಿರೂಪಣೆ ಮತ್ತು ವಿಶ್ಲೇಷಣೆ | –ನೆನಪಿನ ಶಕ್ತಿ, ವಿಶ್ಲೇಷಣಾಸಾಮರ್ಥ್ಯ, ಭಾಷಾ ಉತ್ಪಾದಕತೆ |
| 34. ಟರ್ನ್ ಯುವರ್ ಕೋಟ್ ಇನ್‌ಡಿಬೇಟ್ (ಚರ್ಚೆಯ ಮುಖ ಬದಲಿಸುವುದು) | –ಬಹುಮುಖಿ ದೃಷ್ಟಿಕೋನ, ಅಖಂಡ ಪ್ರಜ್ಞೆ, ವಾಕ್ಪಟುತೆ |
| 35. ಟಿಪ್ಪಣಿ ಮಂಡನೆ, ಸಮಸ್ಯೀಕರಣ | –ಪ್ರಶ್ನಾಮನೋಭಾವ, ಗ್ರಹಿಕೆ, ಸಂಕ್ಷೇಪದೃಷ್ಟಿ, ಸಮಸ್ಯೀಕರಣ |
| 36. ತಜ್ಞರೊಂದಿಗೆ ಸಂವಾದ (ಲೇಖಕ, ಲೋಕಜ್ಞಾನ, ಸಂಭಾಷಣಾ ಕಲಾವಿದ, ನ್ಯಾಯಾಧೀಶ, ವಕೀಲ, ರಾಜಕಾರಣಿ... ಇತ್ಯಾದಿ) | – ಸಾಮರ್ಥ್ಯ, ಗ್ರಹಿಕೆ ಮತ್ತು ಅಭಿವ್ಯಕ್ತಿ |
| 37. ದಂಶರಸ್–ಮೂಕಾಭಿನಯ | –ಗ್ರಹಿಕೆ ಮತ್ತು ಅಭಿವ್ಯಕ್ತಿ, ಕಲ್ಪನಾ ಶಕ್ತಿ |
| 38. ಧರ್ಮ, ಭಾಷೆ, ಜಾತಿ ಇವುಗಳನ್ನು ಕುರಿತು ಕಿರು ಪ್ರಬಂಧ ಬರೆಯಿರಿ | –ಲೇಖನ ಕಲೆ, ವಿಚಾರಪ್ರಜ್ಞೆ, ಸಾಮಾಜಿಕ ಕಾಳಜಿ ಸಂಪ್ರದಾಯ, ಅವಿಭಕ್ತ ಕುಟುಂಬ |
| 39. ನಮ್ಮ ಸುತ್ತಣ ಗಾದೆಗಳು ಎಂಬ ವಿಷಯದ ಮೇಲೆ ಭಾಷಣ | –ಲೋಕಗ್ರಹಿಕೆ ಮತ್ತು ಸ್ವತಂತ್ರ ಚಿಂತನೆ, |
| 40. ನಮ್ಮ ಜನತೆಯ ನಂಬಿಕೆಗಳು ಎಂಬ ಬಗ್ಗೆ ಗುಂಪು ಚರ್ಚೆ | –ಸ್ವತಂತ್ರ ಆಲೋಚನೆ, ಲೋಕವಿಮರ್ಶೆ |
| 41. ನಾಟಕದ ಬಗ್ಗೆ ಲೈವ್ ಆಡಿಯೋ ಕಾಮೆಂಟರಿ | – ಗ್ರಹಿಕೆ ಮತ್ತು ವಿಶ್ಲೇಷಣೆ, ಸ್ವಂತ ನಿಲುವು |
| 42. ನಿಮಗೆ ಇಟ್ಟಿರುವ ಪಠ್ಯಭಾಗದ ಆಡಳಿತ ಕನ್ನಡ ಪರಿಭಾಷಾ ಪದಕೋಶ ರಚಿಸಿ. | –ಪದಕೋಶ ವೃದ್ಧಿ, ಆಡಳಿತ ಪದಜ್ಞಾನ |
| 43. ನಿಮಗೆ ಇಟ್ಟಿರುವ ಪಠ್ಯಭಾಗದ ವಿಜ್ಞಾನ ಪರಿಭಾಷಾ ಪದಕೋಶ ರಚಿಸಿ | –ಪದಕೋಶ ವೃದ್ಧಿ, ವಿಜ್ಞಾನ ಪದಜ್ಞಾನ |
| 44. ನಿಮ್ಮರಾಗ ನಮ್ಮ ಸಾಹಿತ್ಯ (ರಾಗಕ್ಕೆ ಸಾಹಿತ್ಯ ಕಟ್ಟುವುದು) | –ಸಾಹಿತ್ಯ ಸೃಷ್ಟಿ ಮತ್ತು ಲಯ ಸೃಷ್ಟಿ ಕೌಶಲ |
| 45. ನಿಮ್ಮ ಅಧ್ಯಾಪಕರ ಪಾಠವನ್ನು ಧ್ವನಿ ಮುದ್ರಿಸಿ, ಲಿಪಿಯಾಗಿಸಿ ತರಗತಿಯ ವಾಟ್ಸಾಪ್ ಗ್ರೂಪಿನಲ್ಲಿ ಶೇರ್ ಮಾಡಿ | –ಸ್ಪೀಚ್ ಟೆಕ್ಸ್ಟ್‌ಆಪ್ ಬಳಕೆಯ ಕೌಶಲ, ಮಾತಿನಲಿಪ್ಯಂತರಣಕೌಶಲ,ಸಮುದಾಯ ಓದಿನ ಅರಿವು |
| 46. ನಿಮ್ಮ ಸುತ್ತಣ ಗಾದೆ ಮತ್ತು ಒಗಟುಗಳನ್ನು ನಿರೂಪಿಸಿ | –ನೆನಪಿನ ಶಕ್ತಿ, ಸಮುದಾಯ ಪ್ರಜ್ಞೆ |
| 47. ನಿಮ್ಮ ಕುಟುಂಬದ ಮನೆ ವೈದ್ಯ ಪದ್ಧತಿಯನ್ನು ನಿರೂಪಿಸಿ | –ದೇಸಿ ಜ್ಞಾನದ ಬಳಕೆ ಮತ್ತು ಹಂಚಿಕೆ |
| 48. ನಿಯೋಜಿತ ಕಾರ್ಯ, ಸೆಮಿನಾರ್, ಗುಂಪು ಕಲಿಕೆ, ಪ್ರಾಜೆಕ್ಟ್ ವರ್ಕ್ ಇತ್ಯಾದಿಗಳ ಕುರಿತ ಚರ್ಚೆ. | –ಫೀಡ್‌ಬ್ಯಾಕ್, ನಿರಂತರ ಮೌಲ್ಯಮಾಪನದ ಅರಿವು, ಇತರರೊಂದಿಗೆ ಬೆರೆಯುವ ಪ್ರವೃತ್ತಿ |
| 49. ನಿಮ್ಮ ಮೊಬೈಲ್ ಬಳಸಿ ಪಠ್ಯದ ಕೇಳು ಪಠ್ಯ ತಯಾರಿಸಿ. | –ತಂತ್ರಜ್ಞಾನ ಬಳಕೆ ಸಾಮರ್ಥ್ಯ, ಸಮುದಾಯ ಓದಿನ ಅರಿವು |

| | | |
|---|---|---|
| 50. | ನಿಮ್ಮ ತಂದೆ ಕಡೆಯ ಮತ್ತು ತಾಯಿ ಕಡೆಯ ವಂಶವೃಕ್ಷ ರಚಿಸಿ, ಅವುಗಳ ಬಗ್ಗೆ ವಿವರಣೆ ಬರೆಯಿರಿ | – ಮನುಷ್ಯ ಸಂಬಂಧಗಳ ಅರಿವು, ಕೌಟುಂಬಿಕ ಪ್ರಜ್ಞೆ, ಲಿಂಗನ್ಯಾಯ ಪ್ರಜ್ಞೆ, ಕೌಟುಂಬಿಕ ತಾರತಮ್ಯದ ಬಗ್ಗೆ ಅರಿವು. |
| 51. | ನಿಸರ್ಗ ನೋಡಿ ಚಿತ್ರ ರಚಿಸಿ, ವ್ಯಕ್ತಿಯ ರೇಖಾ ಚಿತ್ರ ಬಿಡಿಸಿ | –ಸೃಷ್ಟಿ ಸಾಮರ್ಥ್ಯ ವೃದ್ಧಿ, ಚಿತ್ರಕೌಶಲ ವೃದ್ಧಿ |
| 52. | ನೀವು ಬಲ್ಲ ಕನ್ನಡ ವಿಜ್ಞಾನ ಪುಸ್ತಕಗಳನ್ನು ಪಟ್ಟಿ ಮಾಡಿ ಮತ್ತು ಮತ್ತು ಮಾಹಿತಿಯನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳಿ. | –ನಾಲೆಜ್ ಶೇರಿಂಗ್ ಭಿನ್ನಜ್ಞಾನ ಶಿಸ್ತುಗಳ ಭಾಷಾ ಬಳಕೆಯ ಅರಿವು |
| 53. | ನೆನಪುಗಳ ನಿರೂಪಣೆ | –ನೆನಪಿನ ಶಕ್ತಿ, ಭಾಷಣ ಕಲೆ |
| 54. | ಪದ ಬಿಡಿಸುವುದು, ಕೂಡಿಸುವುದು | – ಪದಕೋಶ ಸಾಮರ್ಥ್ಯ, ನವಪದ ನಿರ್ಮಾಣ ಶಕ್ತಿ |
| 55. | ಪದಗಳ ಅಂತಾಕ್ಷರಿ ಸ್ಪರ್ಧೆ... | –ಪದಕೋಶ ಸಾಮರ್ಥ್ಯ, ಪದಾರ್ಥ ಗ್ರಹಿಕೆ |
| 56. | ಪಠಣ ಮತ್ತು ವ್ಯಾಖ್ಯಾನ ಚಟುವಟಿಕೆ | –ಓದಿನ ಕೌಶಲ, ಗ್ರಹಿಕೆ, ವಿಮರ್ಶಾ ಕೌಶಲ |
| 57. | ಪ್ರಬಂಧರಚನೆ, ಲೇಖನ ರಚನೆ | –ಬರಹರೂಪಿ ಅಭಿವ್ಯಕ್ತಿ ವಿಷಯ ಗ್ರಹಿಕೆ, ಚಿಂತನೆ, |
| 58. | ಪ್ರವಾಸಿ ತಾಣ ಒಂದರ ಪರಿಚಯ, ಮ್ಯೂಸಿಯಮ್, ಸರ್ಕಾರಿ ಆಸ್ಪತ್ರೆ,ಗ್ರಾಮಗಳ ಭೇಟಿ... | –ಭಿನ್ನ ಲೋಕಗ್ರಹಿಕೆ, ಭಿನ್ನ ಭಾಷಾಗ್ರಹಿಕೆ, |
| 59. | ಪ್ರಶ್ನೆ ರೂಪಿಸುವಿಕೆ, ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ ರೂಪಣೆ. | –ಬಹುಸಾಧ್ಯತೆಗಳ ಅರಿವು, ಖಚಿತ್ಯ ಪ್ರಜ್ಞೆ, ಉದ್ಯೋಗ ಕೌಶಲ, ಪಠ್ಯಗ್ರಹಿಕೆ, ಪದಕೋಶ ಸಾಮರ್ಥ್ಯ, |
| 60. | ಪ್ರಸಿದ್ಧ ಕವಿ, ಲೇಖಕರ, ಚಿಂತಕರ ಭಾಷಣಗಳ ಮಿಮಿಕ್ರಿ, | –ವಿಷಯ ಗ್ರಹಿಕೆ, ಅಭಿವ್ಯಕ್ತಿ ಸಾಮರ್ಥ್ಯ |
| 61. | ಪ್ಯಾಸೇಜುಗಳನ್ನ ಓದಿಶೀರ್ಷಿಕೆ ರಚನೆ, ಶೀರ್ಷಿಕೆ ನೀಡುವುದು, ಕಂಡಿಕೆಗಳನ್ನು ಓದಿ ಒಂದು ಪದದಲ್ಲಿ ಹೆಸರಿಸುವುದು | –ಪರಿಭಾಷಾ ಸೃಷ್ಟಿ |
| 62. | ಬಗೆ ಬಗೆಯ ಕ್ವಿಜ್‌ಗಳ ರೂಪಣೆ ಮತ್ತು ಪಾಲ್ಗೊಳ್ಳುವಿಕೆ | – ವಿಷಯ ಗ್ರಹಿಕೆ, ಲೋಕಗ್ರಹಿಕೆ, ಮನನ, ಅಭಿವ್ಯಕ್ತಿ, ಸ್ಪರ್ಧಾ ಮನೋಭಾವ |
| 63. | ಬಿಕ್ಕಟ್ಟಿನ ಸಂದರ್ಭಗಳ ನಿರೂಪಣೆ ಮತ್ತು ಪರಿಹಾರಗಳ ಚರ್ಚೆ | –ಸ್ವಂತ ನಿಲುವು ತಳೆಯುವ ಶಕ್ತಿ, ಆಲೋಚನಾಸಾಮರ್ಥ್ಯ,ನಿರ್ಧಾರ ತಳೆಯುವ ಸಾಮರ್ಥ್ಯ, ನಾಯಕತ್ವ ಗುಣ |
| 64. | ಬಿಡಿ ಬಿಡಿ ಪದಗಳನ್ನ ಬಳಸಿ ಹೊಸ ಪದಗಳನ್ನು ಸೃಷ್ಟಿಸುವುದು | –ಪದಕೂಟ ರಚನಾ ಸಾಮರ್ಥ್ಯ, ನವಪದ ನಿರ್ಮಾಣ ಸಾಮರ್ಥ್ಯ |
| 65. | ಭಕ್ತಿಗೀತೆ, ಭಾವಗೀತೆ, ಸುಗಮಗೀತೆ, ತತ್ವಪದ ಗುರುತಿಸುವುದು, | –ಹಾಡುಗಳ ವೈವಿದ್ಯತೆ ಅರಿವು, |
| 66. | ಭಾಷಾ ಪ್ರಯೋಗಾಲಯದಲ್ಲಿ ಗಣ್ಯರ ಭಾಷಣಗಳನ್ನು ಆಲಿಸಿ, ಗೊತ್ತಿಲ್ಲದ ಪದಗಳ ಪಟ್ಟಿ ತಯಾರಿಸಿ | –ಪದಕೋಶ ವೃದ್ಧಿ, ಆಲಿಕೆ, ಗ್ರಹಿಕೆ, ಬಳಕೆಯ ನೆಲೆಯ ಅರಿವು, ಮಾತಿನ ಕೌಶಲ, |
| 67. | ಮರ, ಹೂವು, ಸೂರ್ಯೋದಯ ಇವುಗಳನ್ನು ಕುರಿತು ಕವಿತೆ ರಚಿಸಿ | –ಸೃಜನಶೀಲ ಸಾಮರ್ಥ್ಯ, |
| 68. | ಮೋಸ, ಹುಟ್ಟು, ಸಾವು ಇವುಗಳನ್ನು ಸೂಚಿಸುವ ಇನ್ನಿತರ ಪದಗಳನ್ನು ಪಟ್ಟಿ ಮಾಡಿ | – ಪದಕೋಶ ವೃದ್ಧಿ, ನವಪದ ನಿರ್ಮಾಣ ಸಾಮರ್ಥ್ಯ |
| 69. | ಯೂನಿಕೋಡ್ ಆಗಿ ಪರಿವರ್ತಿಸಿ, ಉಳಿಸಿ. | – ಫಾಂಟ್ ಪರಿವರ್ತನಾ ಕೌಶಲ, ತಂತ್ರಜ್ಞಾನದ ಬಳಕೆ–ಅರಿ |
| 70. | ರಂಗರೂಪಾಂತರ, ರಂಗಪ್ರಸ್ತುತಿ... | –ಪಠ್ಯವಿಷಯ ಗ್ರಹಿಕೆ, ವಿಶ್ಲೇಷಣೆ,ನಟನಾ ಕೌಶಲ, ಅಭಿವ್ಯಕ್ತಿ ಕೌಶಲ, ಸಾಹಿತ್ಯ ಸೃಷ್ಟಿಶಕ್ತಿ, ರಂಗಪ್ರಜ್ಞೆ, |
| 71. | ರಾಗಸಂಯೋಜನೆ ಮತ್ತು ಗಾಯನ | –ಪಠ್ಯ ಗ್ರಹಿಕೆ, ಸಂಗೀತ ಪ್ರಜ್ಞೆ, ಗಾಯನ ಪ್ರತಿಭೆ, |

| | | |
|---|---|---|
| 72. | ವರ್ತಮಾನದ ವಿದ್ಯಮಾನಗಳ ಆಯ್ಕೆ ಮತ್ತು ಚರ್ಚೆ | –ಲೋಕಗ್ರಹಿಕೆ, ವಿಶ್ಲೇಷಣೆ, ತರ್ಕಶಕ್ತಿ, ಸಾಮಾಜಿಕ ಬದಲಾವಣೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಗಳ ಅರಿವು/ಕ್ರಿಯೆ |
| 73. | ವಿಜ್ಞಾನ ಪರಿಭಾಷಾ ಕೋಶ ರಚಿಸಿ, ಚರ್ಚಿಸಿ. | –ವಿಜ್ಞಾನ ಕನ್ನಡ ಭಾಷಾ ಬಳಕೆಯ/ ಸೃಷ್ಟಿಯ ಸಾಮರ್ಥ್ಯ |
| 74. | ವಿಮರ್ಶೆಯ ಪ್ರಯೋಗ, ವ್ಯಾಖ್ಯಾನಗಳ ಅಭ್ಯಾಸ... | –ಪಠ್ಯಗ್ರಹಿಕೆ, ಬಹುಮುಖಿ ವಿಶ್ಲೇಷಣೆ, ಲೋಕಗ್ರಹಿಕೆ |
| 75. | ವಿಶ್ ಟ್ರೀ ರಚನೆ, (ಸಂಕಲ್ಪ ಮರದ ರಚನೆ) | –ಗುರಿ ಖಾಚಿತ್ಯತೆ, ಸಂಕಲ್ಪ ಶಕ್ತಿ, ಕ್ರಿಯಾಶೀಲತೆ |
| 76. | ವಿಶೇಷ ಉಪನ್ಯಾಸಗಳ ಆಲಿಕೆ, ಧ್ವನಿಮುದ್ರಿಕೆಗಳ ಲಿಪೀಕರಣ... | – ಆಲಿಕೆ, ಗ್ರಹಿಕೆ, ಅಭಿವ್ಯಕ್ತಿ, ಬರಹ ಕೌಶಲ, ಉದ್ಯೋಗ ಕೌಶಲ |
| 77. | ಸಬ್‌ಟೈಟ್ಲಿಂಗ್ (ಅನುವಾದಿತ– ಅಕ್ಷರರೂಪಿ ನಿರೂಪಣೆ) | –ಗ್ರಹಿಕೆ, ಅನುವಾದ ಕೌಶಲ, ಬರಹ ಕೌಶಲ, ಉದ್ಯೋಗ ಕೌಶಲ |
| 78. | ಸಹಸಂಬಂಧಿ ನೆನಪುಗಳ | –ಮನೋಶಕ್ತಿ, ನೆನಪಿನ ಶಕ್ತಿ,ನಿರೂಪಣಾ ಕೌಶಲ ನಿರೂಪಣೆ |
| 79. | ಸಾಮಾಜಿಕ, ಪ್ರಾದೇಶಿಕ ಭಾಷಾ ಪ್ರಭೇದಗಳ ಮಾತುಗಾರಿಕೆ | –ಧ್ವನಿ ಬ್ಯಾಂಕ್ ಆಲಿಕೆ ಮತ್ತು ಅನುಕರಿತ ಪದಕೋಶವೃದ್ಧಿ,ಆಲಿಕೆ,ಗ್ರಹಿಕೆ,ಬಳಕೆಯ ನೆಲೆಯ ಅರಿವು, ಮಾತಿನ ಕೌಶಲ |
| 80. | ಸಾರಾಂಶೀಕರಣ/ಸಂಕ್ಷೇಪೀಕರಣ/ ಶೀರ್ಷಿಕೆ ರಚನೆ | – ಆಶಯಗ್ರಹಿಕೆ, ಅಭಿವ್ಯಕ್ತಿ, ಸಂಕ್ಷೇಪ ಸಾಮರ್ಥ್ಯ |
| 81. | ಸಿನಿಮೀಯ ವಿಶ್ಲೇಷಣೆ (ಸಿನಿಮ್ಯಾಟಿಕ್ ರಿವ್ಯೂ) | –ಆಶಯ ಹಾಗೂ ಪರಿಣಾಮಗಳ ಗ್ರಹಿಕೆ, ವಿಮರ್ಶಾ ಪ್ರಜ್ಞೆ, ದೃಶ್ಯಪ್ರಜ್ಞೆ |
| 82. | (ಸ್ಕ್ರೀನ್ ಪ್ಲೇ ರಚನೆ) ಚಿತ್ರಕಥಾ ರಚನೆ... | –ರೂಪಾಂತರ ಕೌಶಲ, ದೃಶ್ಯ ನಿರ್ಮಾಣ ಕೌಶಲ, ಉದ್ಯೋಗ ಕೌಶಲ |
| 83. | ಸಮಾನಾರ್ಥಕ–ನಾನಾರ್ಥಕ – ವಿರೋಧಾರ್ಥಕಗಳನ್ನು ಹೇಳಿಸುವುದು. | –ಪದಕೋಶ ವೃದ್ಧಿ, ಸಾಮಾಜಿಕ ಶ್ರೇಣೀಕರಣಗಳ ಅರಿವು. |
| 84. | ಸುದ್ದಿ ವಿಶ್ಲೇಷಣೆ | – ಗ್ರಹಿಕೆ ಮತ್ತು ವಿಶ್ಲೇಷಣೆ, ಸ್ವತಂತ್ರ ಲೋಕದೃಷ್ಟಿ |
| 85. | ಹಳಗನ್ನಡ ಪಠ್ಯಗಳ ಸರಳೀಕರಣ | – ಕೌಶಲ, ಪಠ್ಯಗ್ರಹಿಕೆ, ಪದಕೋಶ ವೃದ್ಧಿ. |
| 86. | ಹಲವು ಬಗೆಯ ಗುಂಪು ಚರ್ಚೆಗಳು | –ವಿಷಯ ಗ್ರಹಿಕೆ, ವಿಶ್ಲೇಷಣೆ, ವಿಮರ್ಶೆ, ತರ್ಕಶಕ್ತಿ... |
| 87. | ಹೊಸ ಪುಸ್ತಕ/ಲೇಖನ ಒಂದರ ಓದು ಮತ್ತು ಟಿಪ್ಪಣಿ ಮಂಡನೆ... | –ವಿಷಯ ಗ್ರಹಿಕೆ, ವಿಶ್ಲೇಷಣೆ, ವಿಮರ್ಶೆ ತರ್ಕಶಕ್ತಿ, ಅಭಿವ್ಯಕ್ತಿ... |